ಅಂತ ತಮಾಷೆ ಮಾಡಿದರೂ ಕಣ್ಣಲ್ಲಿ ಅಸೂಯೆ ಕುಣಿಯಬೇಕು. ಆಗ ಇವಳಿಗೆ ಹುಳಿಸಿಹಿ ಚಿಗಳಿ ತಿಂದಂತೆ ತೃಪ್ತಿ. ಬಿಡುವಿದ್ದಾಗಲೆಲ್ಲ ಮತ್ತೆ ಮತ್ತೆ ಅವೇ ಸಂದೇಶ ಓದಿದರೆ ನವಿಲುಗರಿ ಬೆನ್ನಗುಂಟ ಆಡಿದಂತೆ ಪುಲಕ. ಆದರೆ ಇಂದು ಇಷ್ಟು ಡೈರೆಕ್ಟಾಗಿ, 'ನಿನಗಾಗಿ ಡೆಸಪರೇಟ್ ಅಗಿದ್ದೇನೆ' ಎನ್ನುವಷ್ಟು ಧೈರ್ಯ! 'ಅಬ್ಬ ತುಂಬಾ ಭಂಡನಿವ' ಎಂದು ಗಾಬರಿಯಲ್ಲಿ ಸಶಬ್ದವಾಗಿ ಉಸುರಿದ್ದಕ್ಕೆ ಬೆಚ್ಚಿ ಅತ್ತಿತ್ತ ನೋಡಿದಳು. ಮರುಕ್ಷಣ ಸೊಟ್ಟಗೆ ನಗು ಬಂತು. 'ಛೇ ನನ್ನ ಪಿಸುಮಾತು ಕೇಳಲಿಕ್ಕೆ ಯಾರಿದ್ದಾರಿಲ್ಲಿ? ನಾನೊಬ್ಬಳು ಹುಚ್ಚಿ. ಥಿಯೇಟರಿಗೆ ನಾ ಹೋಗಿ ಬಂದರೂ ಎಲ್ಲಿ ಹೋಗಿದ್ದೆ? ಯಾಕೆ ಲೇಟು? ಅಂತ ಕೇಳೋರೂ ದಿಕ್ಕಿಲ್ಲ ನಂಗೆ. ಪಿಕ್ಚರಿಗೆ ಹೋಗಿಯೇ ಬರಬೇಕು ಒಬ್ಬಳೇ ಅವನೊಟ್ಟಿಗೆ.' ನೀರು ಕತಕತ ಕುದಿಯುತ್ತಿತ್ತು. ಪುಡಿ ಹಾಕಿ ಇಳಿಸಿದಳು.

ಅತ್ತೆಗೆ ಕಾಫಿಲೋಟ ಕೊಡಲು ಹೋದರೆ, ಅವರು ಹಾಲಲ್ಲಿ ಮೇಜಿನ ಪಕ್ಕ ಆಗಲೇ ಬಗ್ಗಿದ ತಮ್ಮ ಸೊಂಟ ಇನ್ನಷ್ಟು ಬಗ್ಗಿಸಿ ನಿಂತು ಏನೋ ನೋಡುತ್ತಿದ್ದರು.

